# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 106 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 09.12.2024 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ತುಮಕೂರು ಜಿಲ್ಲೆ ಚಾಲ್ತಿಯಲ್ಲಿರುವ ಒಟ್ಟು ಬಿಪಿಎಲ್ ಮತ್ತು ಎಪಿಎಲ್ ಕಾರ್ಡ್‌ಗಳ ಸಂಖ್ಯೆ ಎಷ್ಟು: | ತುಮಕೂರು ಜಿಲ್ಲೆಯಲ್ಲಿ ಚಾಲ್ತಿಯಲ್ಲಿರುವ ಪಡಿತರ ಚೀಟಿಗಳ ವಿವರ ಈ ಕೆಳಕಂಡಂತಿರುತ್ತವೆ. |

| | ಅಂತ್ಯೋದಯ ಅನ್ನ ಯೋಜನೆ ಪಡಿತರ ಚೀಟಿ | ಆದ್ಯತಾ ಪಡಿತರ ಚೀಟಿ | ಆದ್ಯತೇತರ ಪಡಿತರ ಚೀಟಿ | ಒಟ್ಟು |
|---|---|---|---|---|
| ಪಡಿತರ ಚೀಟಿಗಳು | 49,347 | 6,02,958 | 67,182 | 7,19,487 |
| ಫಲಾನುಭವಿಗಳು | 1,96,303 | 20,20,366 | 208947 | 24,25,616 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಆ | ಈ ಜಿಲ್ಲೆಯಲ್ಲಿ ರದ್ದಾದ/ ಪರಿವರ್ತನೆಯಾದ ಬಿಪಿಎಲ್ ಪಡಿತರ ಚೀಟಿಗಳ ಸಂಖ್ಯೆ ಎಷ್ಟು: (ತಾಲ್ಲೂಕುವಾರು ವಿವರ ನೀಡುವುದು) | ತುಮಕೂರು ಜಿಲ್ಲೆಯಲ್ಲಿ 1615 ಪಡಿತರ ಚೀಟಿಗಳನ್ನು ರದ್ದತಿ/ ಆದ್ಯತೇತರ ಪಡಿತರ ಚೀಟಿಗಳನ್ನಾಗಿ ಪರಿವರ್ತಿಸಲಾಗಿರುತ್ತದೆ.<br>ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ಒದಗಿಸಲಾದೆ.<br>ತದನಂತರ ಪುನರ್ ಪರಿಶೀಲಿಸಿ ಆದಾಯ ತೆರಿಗೆ ಪಾವತಿದಾರರು ಹಾಗೂ ಸರ್ಕಾರಿ ನೌಕರರನ್ನು ಹೊರತುಪಡಿಸಿ ಉಳಿದ ಎಲ್ಲಾ ಪಡಿತರ ಚೀಟಿಗಳನ್ನು ಆದ್ಯತಾ ಪಡಿತರ ಚೀಟಿಗಳನ್ನಾಗಿ ಮರು ಸ್ಥಾಪಿಸಲಾಗಿರುತ್ತದೆ. |
| ಇ | ಯಾವ ಮಾನದಂಡಗಳ ಆಧಾರದ ಮೇಲೆ ಪಡಿತರ ಚೀಟಿಗಳನ್ನು ರದ್ದುಮಾಡಲಾಗಿದೆ/ ಪರಿವರ್ತನೆ ಮಾಡಲಾಗಿದೆ: | ರಾಜ್ಯದಲ್ಲಿ ಆದ್ಯತಾ ಪಡಿತರ ಚೀಟಿಗಳನ್ನು ಪಡೆಯುವ ಬಗ್ಗೆ ಸರ್ಕಾರವು 2017 ರಲ್ಲಿ ಹೊರಗಿಡುವ ಮಾನದಂಡಗಳನ್ನು ರೂಪಿಸಿದೆ.<br>• ವೇತನವನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲಾ ಖಾಯಂ ನೌಕರರು ಅಂದರೆ ಸರ್ಕಾರದ ಅಥವಾ ಸರ್ಕಾರದಿಂದ ಅನುದಾನವನ್ನು ಪಡೆಯುತ್ತಿರುವ ಸಂಸ್ಥೆಗಳು ಅಥವಾ ಸರ್ಕಾರಿ ಪ್ರಾಯೋಜಿತ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು/ಮಂಡಳಿಗಳು/ನಿಗಮಗಳು/ಸ್ವಾಯತ್ತ ಸಂಸ್ಥೆಗಳು ಇತ್ಯಾದಿ ಒಳಗೊಂಡಂತೆ ಆದಾಯ ತೆರಿಗೆ/ಸೇವಾ ತೆರಿಗೆ/ ವ್ಯಾಟ್/ವೃತ್ತಿ ತೆರಿಗೆ ಪಾವತಿಸುವ ಎಲ್ಲಾ ಕುಟುಂಬಗಳು.<br>• ಗ್ರಾಮೀಣ ಪ್ರದೇಶಗಳಲ್ಲಿ 03 ಹೆಕ್ಟರ್ ಒಣಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿರುವ ಕುಟುಂಬಗಳು ಅಥವಾ ಗ್ರಾಮೀಣ ಪ್ರದೇಶವನ್ನು ಹೊರತುಪಡಿಸಿ ನಗರ ಪ್ರದೇಶಗಳಲ್ಲಿ 1000 ಚದರ ಅಡಿಗಿಂತಲೂ ಹೆಚ್ಚಿನ ವಿಸ್ತೀರ್ಣದ ಪಕ್ಕಾ ಮನೆಯನ್ನು ಸ್ವಂತವಾಗಿ ಹೊಂದಿರುವ ಕುಟುಂಬಗಳು. |

| | | |
|---|---|---|
| | | • ಜೀವನೋಪಾಯಕ್ಕಾಗಿ ಸ್ವತಃ ಓಡಿಸುವ ಒಂದು ವಾಣಿಜ್ಯ ವಾಹನವನ್ನು ಅಂದರೆ ಟ್ರಾಕ್ಟರ್, ಮ್ಯಾಕ್ಸಿಕ್ಯಾಬ್, ಟ್ಯಾಕ್ಸಿ ಇತ್ಯಾದಿಗಳನ್ನು ಹೊಂದಿದ ಕುಟುಂಬವನ್ನು ಹೊರತುಪಡಿಸಿನಾಲ್ಕು ಚಕ್ರದ ವಾಹನಗಳನ್ನು ಹೊಂದಿರುವ ಎಲ್ಲಾ ಕುಟುಂಬಗಳು.<br>• ಕುಟುಂಬದ ವಾರ್ಷಿಕ ಆದಾಯವು ರೂ. 1.20 ಲಕ್ಷಗಳಿಗಿಂತಲೂ ಹೆಚ್ಚು ಇರುವ ಕುಟುಂಬಗಳು. |
| ಈ | ಹಲವು ಬಡ ಕುಟುಂಬಗಳು ಬಿಪಿಎಲ್ ಪಡಿತರ ಚೀಟಿಗೆ ಅರ್ಹರಿದ್ದರೂ ಸಹ ರದ್ದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಅವರಿಗೆ ಪುನ: ಬಿಪಿಎಲ್ ಕಾರ್ಡ್‌ಗಳನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು: | ಆದಾಯ ತೆರಿಗೆ ಪಾವತಿದಾರರು ಹಾಗೂ ಸರ್ಕಾರಿ ನೌಕರರನ್ನು ಹೊರತುಪಡಿಸಿ ಉಳಿದ ಎಲ್ಲಾ ಪಡಿತರ ಚೀಟಿಗಳನ್ನು ಆದ್ಯತಾ ಪಡಿತರ ಚೀಟಿಗಳನ್ನಾಗಿ ಮರು ಸ್ಥಾಪಿಸಲಾಗಿರುತ್ತದೆ. |
| ಉ | ಕಾರ್ಡ್ ವಿತರಣೆ ಸಮಯದಲ್ಲಿ ಬಿಪಿಎಲ್ ಮಾನದಂಡದ ವ್ಯಾಪ್ತಿಗೆ ಇದ್ದು ನಂತರ ಬಿಪಿಎಲ್ ಮಾನದಂಡಕ್ಕೆ ಒಳಪಡದೆ ಇದ್ದಲ್ಲಿ ಸ್ವ-ಇಚ್ಚೆಯಿಂದ ಕಾರ್ಡ್ ಹಿಂತಿರುಗಿಸಲು ಇರುವ ಆಯ್ಕೆಗಳು ಯಾವುವು; ಇದರ ಬಗ್ಗೆ ಸಾರ್ವಜನಿಕರಿಗೆ ತಿಳುವಳಿಕೆ ಮೂಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು: | ಕಾರ್ಡ್ ವಿತರಣೆ ಸಮಯದಲ್ಲಿ ಬಿ.ಪಿ.ಎಲ್ ಮಾನದಂಡದ ವ್ಯಾಪ್ತಿಗೆ ಇದ್ದು ನಂತರ ಬಿ.ಪಿ.ಎಲ್ ಮಾನದಂಡಕ್ಕೆ ಒಳಪಡದೆ ಇದ್ದಲ್ಲಿ ಕಾರ್ಡ್‌ದಾರರು ಸ್ವ-ಇಚ್ಚೆಯಿಂದ ಕಾರ್ಡ್ ಹಿಂತಿರುಗಿಸಲು ಸಕಾರಣ ಮತ್ತು ಸೂಕ್ತ ದಾಖಲೆಗಳೊಂದಿಗೆ ಸಂಬಂಧಪಟ್ಟ ತಾಲ್ಲೂಕು ಕಛೇರಿಯಲ್ಲಿ ಅರ್ಜಿ ಸಲ್ಲಿಸಬೇಕಾಗುತ್ತದೆ. ಈ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲು ದಿನ ಪತ್ರಿಕೆಗಳಲ್ಲಿ ಪತ್ರಿಕಾ ಪ್ರಕಟಣೆಗಳನ್ನು ನೀಡಲಾಗಿರುತ್ತದೆ. ಮತ್ತು ನ್ಯಾಯಬೆಲೆ ಅಂಗಡಿಗಳ ಮುಂಭಾಗ ಈ ಸಂಬಂಧ ಪೋಸ್ಟರ್‌ಗಳನ್ನು ಸಹ ಅಂಟಿಸಲಾಗಿರುತ್ತದೆ. |

ಆನಾಸ 348 ಡಿಆರ್‌ಎ 2024

(ಕೆ.ಹೆಚ್. ಮುನಿಯಪ್ಪ)
ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ
ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ
ಇಲಾಖಾ ಸಚಿವರು

LCQ- 106

**ಶ್ರೀ ಚಿದಾನಂದ.ಎಂ.ಗೌಡ (ಪದವೀಧರರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:106**

## ಅನುಬಂಧ-1

ತುಮಕೂರು ಜಿಲ್ಲೆಯಲ್ಲಿ ರದ್ದಾದ/ಪರಿವರ್ತನೆಯಾದ ಬಿಪಿಎಲ್ ಪಡಿತರ ಚೀಟಿಗಳ ಸಂಖ್ಯೆ

| ತಾಲ್ಲೂಕಿನ ಹೆಸರು | ಆದಾಯ ತೆರಿಗೆ ಪಾವತಿದಾರರು | ಸರ್ಕಾರಿ ನೌಕರರು | ಒಟ್ಟು |
|---|---|---|---|
| ಚಿಕ್ಕನಾಯಕನಹಳ್ಳಿ | 87 | 25 | 112 |
| ಗುಬ್ಬಿ | 107 | 8 | 115 |
| ಕೊರಟಗೆರೆ | 63 | 15 | 78 |
| ಕುಣಿಗಲ್ | 195 | 19 | 214 |
| ಮಧುಗಿರಿ | 104 | 33 | 137 |
| ಪಾವಗಡ | 75 | 12 | 87 |
| ಶಿರಾ | 112 | 21 | 133 |
| ತಿಪಟೂರು | 101 | 26 | 127 |
| ತುಮಕೂರು | 463 | 48 | 511 |
| ತುರುವೇಕೆರೆ | 98 | 3 | 101 |
| **ಒಟ್ಟು** | **1405** | **210** | **1615** |

ಆಯುಕ್ತರು,
ಆಹಾರ, ನಾಗರಿಕ ಸರಬರಾಜು
ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ,
ಬೆಂಗಳೂರು.